ಕರ್ನಾಟಕ ಸರ್ಕಾರ

ಸಂ. ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:13-08-2021

ಆದೇಶ

ಕೋವಿಡ್-19 ಕಣ್ಗಾವಲು ನಿಯಂತ್ರಣ ಮತ್ತು ಜಾಗ್ರತೆ ಮಾರ್ಗಸೂಚಿಗಳ ವಿಸ್ತರಣೆ.

ಓದಲಾಗಿದೆ: 1) ಕಣ್ಗಾವಲು, ನಿಯಂತ್ರಣ ಮತ್ತು ಜಾಗ್ರತೆ ಮಾರ್ಗಸೂಚಿಗಳನ್ನು ಹೊರಡಿಸಲಾದ ಇದೇ ಸಮ ಸಂಖ್ಯೆಯ ಆದೇಶ ದಿನಾಂಕ:03-07-2021.

2) ವೈದ್ಯಕೀಯ ಕಾಲೇಜುಗಳು ಮತ್ತು ಸಂಬಂಧಿತ ಸಂಸ್ಥೆಗಳನ್ನು ಪುನರಾರಂಭಿಸಲು ಹೊರಡಿಸಿರುವ ಇದೇ ಸಮ ಸಂಖ್ಯೆಯ ಆದೇಶ ದಿನಾಂಕ:16.07.2021.

3) ಕಣ್ಗಾವಲು, ನಿಯಂತ್ರಣ, ಜಾಗ್ರತೆ ಮಾರ್ಗಸೂಚಿಗಳನ್ನು ಮತ್ತು ಹೆಚ್ಚುವರಿ ಚಟುವಟಿಕೆಗಳನ್ನು ಮುಂದುವರಿಸಲು ಹೊರಡಿಸಲಾದ ಇದೇ ಸಮ ಸಂಖ್ಯೆಯ ಆದೇಶ ದಿನಾಂಕ:18-07-2021.

4) ಪೂಜಾ ಸ್ಥಳಗಳ ಕಾರ್ಯನಿರ್ವಹಣೆ ಕುರಿತು ಹೊರಡಿಸಿರುವ ಇದೇ ಸಮ ಸಂಖ್ಯೆಯ ಆದೇಶ ದಿನಾಂಕ:24.07.2021.

5) ಅಗತ್ಯವಿದ್ದಲ್ಲಿ ಹೆಚ್ಚುವರಿ ನಿಯಂತ್ರಣ ಕ್ರಮಗಳನ್ನು ವಿಧಿಸುವಂತೆ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ಮತ್ತು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿ ಹೊರಡಿಸಿರುವ ಇದೇ ಸಮ ಸಂಖ್ಯೆಯ ಆದೇಶ ದಿನಾಂಕ:30.07.2021.

6) ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳನ್ನು ದಿನಾಂಕ:16.08.2021ರವರೆಗೆ ಮುಂದುವರಿಸಿರುವ ಇದೇ ಸಮ ಸಂಖ್ಯೆಯ ಆದೇಶ ದಿನಾಂಕ:31.07.2021.

7) ಕೋವಿಡ್-19 ಹರಡುವಿಕೆಯನ್ನು ತಡೆಗಟ್ಟಲು ಹೆಚ್ಚುವರಿ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸಿರುವ ಇದೇ ಸಮ ಸಂಖ್ಯೆಯ ಆದೇಶ ದಿನಾಂಕ:06.08.2021.

8) ಮೊಹರಂ ಮತ್ತು ಗಣೇಶ ಚತುರ್ಥಿ ಹಬ್ಬಗಳ ಆಚರಣೆಗಾಗಿ ಮಾರ್ಗಸೂಚಿಗಳನ್ನು ಹೊರಡಿಸಿರುವ ಆದೇಶ ಸಂಖ್ಯೆ: ಕಂಇ 341 ಟಿಎನ್‌ಆರ್ 2021, ದಿನಾಂಕ:12.08.2021.

*****

ರಾಜ್ಯದಲ್ಲಿನ ಕೋವಿಡ್-19 ಪರಿಸ್ಥಿತಿಯನ್ನು ಮತ್ತೊಮ್ಮೆ ಪರಿಶೀಲಿಸಲಾಗಿದ್ದು, ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ಕರ್ನಾಟಕ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಹೊಸ ಕೋವಿಡ್-19 ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಗಮನಿಸಲಾಗಿದೆ. ಕೋವಿಡ್-19 ವೈರಾಣು ಸೋಂಕು ವ್ಯಾಪಕವಾಗಿ ಹರಡುವುದನ್ನು ತಡೆಯಲು ಕೇಂದ್ರೀಕೃತ ಕಣ್ಗಾವಲು, ಕೋವಿಡ್-19 ಸಮುಚಿತ ವರ್ತನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಮತ್ತು ಸ್ಥಳೀಯವಾಗಿ ಹರಡುವಿಕೆಯನ್ನು ನಿಯಂತ್ರಿಸಲು ಇತರೆ ಸಾರ್ವಜನಿಕ ಆರೋಗ್ಯ ಕ್ರಮಗಳನ್ನು ಅನುಸರಿಸುವಂತೆ ಆರೋಗ್ಯ ಪರಿಣಿತರು ಸೂಚಿಸಿರುತ್ತಾರೆ.

ಆದ್ದರಿಂದ, ಪ್ರಸ್ತುತ, ವಿಪತ್ತು ನಿರ್ವಹಣಾ ಅಧಿನಿಯಮ, 2005 ರ ಪ್ರಕರಣ 24 ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರ ನಿರ್ದೇಶನದಂತೆ, ಈ ಕೆಳಗೆ ಸಹಿ ಮಾಡಿರುವ ನಾನು, ಇದೇ ಸಮ ಸಂಖ್ಯೆಯ ಆದೇಶ ದಿನಾಂಕ:03.07.2021ರಲ್ಲಿ ಹೊರಡಿಸಲಾದ ಕಣ್ಗಾವಲು, ನಿಯಂತ್ರಣ ಮತ್ತು ಜಾಗರೂಕತೆ ಮಾರ್ಗಸೂಚಿಗಳನ್ನು ಮತ್ತು ಸದರಿ ಮಾರ್ಗಸೂಚಿಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ಮೇಲೆ ಓದಲಾದ ಆದೇಶಗಳನ್ನು ರಾಜ್ಯಾದ್ಯಂತ **ದಿನಾಂಕ:30-08-2021ರ ಬೆಳಿಗ್ಗೆ 06:00ಗಂಟೆಯವರೆಗೆ** ಮುಂದುವರೆಸಿ ಆದೇಶಿಸಿರುತ್ತೇನೆ. ಈ ಮಾರ್ಗಸೂಚಿಗಳನ್ನು ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪೊಲೀಸ್ ಆಯುಕ್ತರು, ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಇತರ ಇಲಾಖಾ ಮುಖ್ಯಸ್ಥರು ಮತ್ತು ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸತಕ್ಕದ್ದು.

ಮುಂದುವರೆದು, ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲೆಗಳ ಜಿಲ್ಲಾಧಿಕಾರಿಗಳು, ತಮ್ಮ ಕಾರ್ಯ ಕ್ಷೇತ್ರದ ವ್ಯಾಪ್ತಿಯಲ್ಲಿ ಕೋವಿಡ್-19 ಸ್ಥಿತಿಗತಿಯನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ನಡೆಸುವುದು ಹಾಗೂ ಕೋವಿಡ್-19 ಸ್ಥಿತಿಗತಿಯ ಮೌಲ್ಯಮಾಪನದ ಆಧಾರದ ಮೇಲೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರೊಂದಿಗಿನ ಸಮಾಲೋಚನೆಯ ನಂತರ ಅಗತ್ಯವೆಂದು ಕಂಡುಬಂದಲ್ಲಿ ಹೆಚ್ಚುವರಿ ನಿಯಂತ್ರಣ ಕ್ರಮಗಳನ್ನು ವಿಧಿಸಬಹುದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ದಿನಾಂಕ:31.07.2021ರಂದು ಹೊರಡಿಸಿರುವ ಸುತ್ತೋಲೆಯನುಸಾರ ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೊಂದಿಕೊಂಡಿರುವ ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ಹೆಚ್ಚಿನ ಕಣ್ಗಾವಲು ಇರಿಸತಕ್ಕದ್ದು.

(ತುಷಾರ್ ಗಿರಿನಾಥ್, ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ (ವಿ.ನಿ) ಮತ್ತು
ಸದಸ್ಯ ಕಾರ್ಯದರ್ಶಿ, ರಾಜ್ಯ ಕಾರ್ಯಕಾರಿ ಸಮಿತಿ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.

GOVERNMENT OF KARNATAKA

No. RD 158 TNR 2020

Karnataka Government Secretariat,
MS Building,
Bengaluru, Dated: 13-08-2021

ORDER

Extension of guidelines for surveillance, containment and caution

Read

1. Guidelines for surveillance, containment and caution issued vide order of even number dated 03-07-2021
2. Order of even number dated 16-07-2021 reg. reopening of Medical colleges and allied institutions
3. Extension of guidelines for surveillance, containment and caution and additional activities issued vide order of even number dated 18-07-2021
4. Order of even number dated 24-07-2021 reg. functioning of places of worship
5. Order of even number dated 30-07-2021 reg. empowering Chief Commissioner-BBMP and DCs to impose additional containment measures as deemed necessary.
6. Order of even number dated 31-07-2021 reg. extension of existing guidelines upto 16-08-2021
7. Order of even number dated 06-08-2021 reg. containment measures to prevent spread of COVID 19.
8. Order No. RD 341 TNR 2021, dated 12-08-2021 reg. guidelines for conduct of Muharram and Ganesha Chaturthi festivals.

****

Whereas, the COVID 19 situation in the State has again been reviewed and it has been observed that there has been steady increase in new COVID 19 cases in districts bordering Kerala State. The Health Experts have suggested focused surveillance, strict adherence to COVID 19 appropriate behaviour and other public health measures to contain the spread locally.

Now, therefore, in exercise of the powers conferred under the Section 24 (l) of the Disaster Management Act, 2005, the Chairman, State Executive Committee, hereby directs that the guidelines for COVID 19 surveillance,

containment and caution issued vide order of even number dated 03-07-2021 and connecting orders with respect to the said guidelines, as read above, will remain in force in the entire State upto 6 am of 30-08-2021, for strict implementation by Chief Commissioner BBMP, Police Commissioners, Deputy Commissioners, Superintendents of Police, and other Heads of Departments and Authorities.

Further, the Chief Commissioner-BBMP, Deputy Commissioners of the districts to strictly monitor the COVID situation in their respective jurisdictions, and based on their assessment of the situation and after consultation with the District-in-charge Minister, may impose additional containment measures as deemed necessary. There will be strict surveillance at the border posts setup by the districts adjoining Kerala and Maharashtra States as per the circular dated 31-07-2021 issued by Department of Health and family Welfare, Govt. of Karnataka.

(Tushar Giri Nath, IAS)
Principal Secretary to Govt., Revenue
Department (DM) and Member Secretary,
State Executive Committee

To:
The Compiler, Karnataka Gazette, Bengaluru